ಆದಷ್ಟು ಜಾಗ್ರತೆ ಈ ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿಪಡಿಸುವುದಾಗಿ ಕಳಿಸಿದ್ದಾರೆ. ಅಂದಾಜು ಮತ್ತು ಪ್ಲಾನುಗಳನ್ನು ತಯಾರಿಸಿ 8 ತಿಂಗಳ ಮೇಲಾಗಿದ್ದರೂ, ಈ ಕೆಲಸಗಳು ಪ್ರಾರಂಭವಾಗದೆ ಜನರು ಕುಡಿಯುವ ನೀರಿಗಾಗಿ ವಿಪರೀತ ತೊಂದರೆಪಡುತ್ತಿರುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) : ಮಾನ್ಯ ಉಪಾಧಕ್ಷಿಣೆಯವರೇ, ಈ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

2) ಮೈಸೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬೋನಸ್ ಕೊಡಲು ಮನವಿ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಸಭಾಧ್ಯಕ್ಷಿಣೆಯವರೇ, ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು 1989-90ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ ಸುಮಾರು 5 ಲಕ್ಷ ಟನ್ನಿಗೂ ಹೆಚ್ಚು ಪ್ರಮಾಣದಲ್ಲಿ ಕಬ್ಬನ್ನು ಅರೆದಿದ್ದಾರೆ. ಈ ಸಾಲಿನಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯು ಗಣನೀಯ ಪ್ರಮಾಣದಲ್ಲಿ ಲಾಭವನ್ನು ಗಳಿಸಿದೆ. ಮಂಡ್ಯ ಜಿಲ್ಲೆಯಲ್ಲಿನ ಇತರೆ ಸಕ್ಕರೆ ಕಾರ್ಖಾನೆಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಿ ಉತ್ತಮವಾಗಿ ಲಾಭ ಗಳಿಸಿ, ತಮ್ಮ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಪ್ರೋತ್ಸಾಹಕರವಾದ ರೀತಿಯಲ್ಲಿ ಬೋನಸ್ ಹಣವನ್ನು ಕೊಟ್ಟಿದೆ.

ಆದರೆ ಮೈಸೂರು ಸಕ್ಕರೆ ಕಾರ್ಖಾನೆಯು ಲಾಭಗಳಿಸಿದ್ದರೂ ಹಾಗೂ ಬೋನಸ್‌ಹಣಕ್ಕಾಗಿ ರೈತರು ಅನೇಕ ಬಾರಿ ಮಂಡಳಿಗೆ ಮನವಿ ಮಾಡಿದ್ದರೂ ಸಹಾ, ಯಾವ ರೀತಿಯ ಪರಿಹಾರವೂ ಸಹಾ ಈವರೆಗೆ ದೊರಕಿರುವುದಿಲ್ಲ.

ಈ ತಾರತಮ್ಯದ ಧೋರಣೆಯಿಂದ ರೈತರು ನಿರಾಶರಾಗಿದ್ದಾರೆ ಹಾಗೂ ಕಳವಳ ಕಾರಿಯಾದ ಪರಿಸ್ಥಿತಿ ಇದೆ. ಈ ನಿಧಾನಗತಿಯ ತೀರ್ಮಾನದಿಂದಾಗಿ ಬರುವ ಆರ್ಥಿಕ ವರ್ಷದಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಕಾರ್ಯದ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಈ ಪರಿಸ್ಥಿತಿಯ ಬಗೆಗೆ ಹಾಗೂ ರೈತರಿಗೆ ಆಗಿರುವ ತೊಂದರೆ ಬಗೆಗೆ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇವೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) (ಶ್ರೀ ಎಸ್. ಬಂಗಾರಪ್ಪ ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷಿಣೆಯವರೇ, ಮೈಸೂರು ಸಕ್ಕರೆ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯು ಇನ್ನು ಮುಗಿದಿಲ್ಲದ ಕಾರಣ ಸದರಿ ವರ್ಷದಲ್ಲಿ ಲಾಭ ಮತ್ತು ನಷ್ಟ ಆಗಿದೆಯೇ ಎಂಬ ಬಗ್ಗೆ ಸಧ್ಯಕ್ಕೆ ಖಚಿತವಾಗಿ ಹೇಳಲಾಗುವುದಿಲ್ಲ.

ಆದರೂ, ಮೈಸೂರು ಸಕ್ಕರೆ ಕಾರ್ಖಾನೇಯು 1989-90ನೇ ಸಾಲಿನಲ್ಲಿ ರಾಜ್ಯ ಸಲಹಾ ಬೆಲೆಯು ನಿಗಧಿಪಡಿಸಿದ ರೂ. 325-00ಗಳಿಗೆ ಬದಲಾಗಿ ರೂ. 335-00ಗಳನ್ನು ಪ್ರತಿ ಮೆಟ್ರಿಕ್ ಟನ್ನಿಗೆ ರೈತರಿಗೆ ನೀಡಿದೆ.

ಸಕ್ಕರೆ ಕಾರ್ಖಾನೆಗೆ ಲಾಭ ಬಂದಿದೆಯೆಂದು ಖಚಿತವಾಗಿ ನಂತರವೇ ರೈತರಿಗೆ ಬೋನಸ್ ಕೊಡುವ ಪ್ರಶ್ನೆ ಉದ್ಭವಿಸುವುದು. ಸದರಿ ಕಾರ್ಖಾನೆಯ 1989-90ನೇ ಸಾಲಿನ ಲೆಕ್ಕ ಪರಿಶೋಧನೆಯು 1991ನೇ ಮಾರ್ಚಿ ಅಂತ್ಯದಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ.

ಸದರಿ ಕಾರ್ಖಾನೆಯು ದಿನಾಂಕ 31.3.89ರ ಅಂತ್ಯದವರೆವಿಗೂ ನಷ್ಟದಲ್ಲಿತ್ತು.